

# ಗ್ರಾಮಸಭೆ ನಮ್ಮೂರ ವಿಧಾನ ಸಭೆ

ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರಕಟಣೆ :
ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)
ಬೆಂಗಳೂರು – 560084

ಪ್ರಕಾಶನಕ್ಕೆ ಸಹಕಾರ
ಕಾರಿಥಾಸ್ ಇಂಡಿಯಾ, ನವದೆಹಲಿ

Caritas INDIA
The Joy of Service...

ಗ್ರಾಮಸಭೆ ನಮ್ಮೂರ ವಿಧಾನ ಸಭೆ ನಮ್ಮದು ಪ್ರಜಾಪ್ರಭುತ್ವ ಪದ್ಧತಿಯ ಆಡಳಿತವನ್ನು ಅಳವಡಿಸಿಕೊಂಡ ದೇಶ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನ ಸಾಮಾನ್ಯರು ಆಡಳಿತದಲ್ಲಿ ಪಾಲ್ಗೊಳ್ಳಬೇಕು. ಆದಕ್ಕೆ ಅವಕಾಶ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಗ್ರಾಮ ಸಭೆಗಳಿಗೆ ಉಸಿರು ತುಂಬಲಾಗಿದೆ. ಕರ್ನಾಟಕ ರಾಜ್ಯವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗ್ರಾಮ ಸಭೆಗಳಿಗಿಂತಲೂ ತಳಮಟ್ಟದಲ್ಲಿ ವಾರ್ಡ್ ಸಭೆಗಳನ್ನು ಹುಟ್ಟು ಹಾಕಿದೆ. ವಾರ್ಡ್ ಮತ್ತು ಗ್ರಾಮ ಸಭೆಗಳ ರಚನೆಯ ಹಿಂದಿರುವ ಉದ್ದೇಶಗಳು ಹೀಗಿವೆ.

## ವಾರ್ಡ್ / ಗ್ರಾಮ ಸಭೆಯ ಉದ್ದೇಶಗಳು

- ಆಡಳಿತದಲ್ಲಿ ಜನಸಹಭಾಗಿತ್ವಕ್ಕೆ ಅವಕಾಶ , ಆಡಳಿತದಲ್ಲಿ ಪಾರದರ್ಶಕತೆ
- ಸಮಸ್ಯೆಗಳನ್ನು ಸ್ಥಳೀಯವಾಗಿ ಗುರುತಿಸುವುದು, ಆದ್ಯತೆಗಳನ್ನು ನಿರ್ಧರಿಸುವುದು ಮತ್ತು ಪರಿಹಾರ ಕಂಡುಕೊಳ್ಳುವುದು.
- ಶೋಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸುವುದು.
- ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ
- ಸಮಗ್ರ ಮಾನವ ಅಭಿವೃದ್ಧಿಯ ಗುರಿಯ ಸಾಧನೆ

## ವಾರ್ಡ್ ಸಭೆ

ವಾರ್ಡ್ ಸಭೆಗಳು ಅಧಿಕಾರ ವಿಕೇಂದ್ರೀಕರಣ ವ್ಯನಸ್ಥೆಯ ಅತ್ಯಂತ ತಳಹಂತದ ಬೇರುಗಳು. ಇವುಗಳು ಪಂಚಾಯಿತಿ ರಾಜ್ ವ್ಯವಸ್ಥೆಗೆ ಪೋಷಕಾಂಶಗಳನ್ನು ಹೀರಿಕೊಡುವ ಕೆಲಸವನ್ನು ಮಾಡುತ್ತವೆ. ವಾರ್ಡ್ ಸಭೆಗಳನ್ನು ಪರಿಣಾಮಕಾರಿ ನಡೆಸುವ ನಿಟ್ಟಿನಲ್ಲಿ ಕೆಲವು ನಿಯಮಗಳನ್ನು ರೂಪಿಸಲಾಗಿದೆ.

- 6 ತಿಂಗಳಿಗೊಮ್ಮೆ ವಾರ್ಡ್ ಸಭೆ ನಡೆಸಬೇಕು
- ವಾರ್ಡಿನ ಮತದಾರರ ಶೇ.10ರಷ್ಟು ಅಥವಾ 20 ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅದು ವಾರ್ಡ್ ಸಭೆಯ ಕೋರಂ.
- ವಾರ್ಡ ಸಭೆಯ ಹಾಜರಾತಿಯಲ್ಲಿ ಮಹಿಳೆಯರ ಸಂಖ್ಯೆ ಶೇ.33ಕ್ಕೆ ಕಡಿಮೆ ಇಲ್ಲದಂತೆ ನೋಡಿಕೊಳ್ಳಬೇಕು.
- ಪರಿಶಿಷ್ಠ ಜಾತಿ / ಪಂಗಡಗಳ ಜನರ ಹಾಜರಾತಿ ಪ್ರಮಾಣ ಅವರ ಒಟ್ಟು ಜನಸಂಖ್ಯೆಗೆ ಅನುಗುಣವಾಗಿರಬೇಕು.



- ವಾರ್ಡ್ ಸಭೆಯ ಅಧ್ಯಕ್ಷತೆಯನ್ನು ಆ ವಾರ್ಡಿನ ಸದಸ್ಯರೇ ವಹಿಸಬೇಕು. ಒಂದು ವಾರ್ಡಿನಲ್ಲಿ ಒಂದುಕ್ಕಿಂತ ಹೆಚ್ಚು ಸದಸ್ಯರು ಇರುವ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ನಾಮ ನಿರ್ದೇಶನ ಮಾಡಿದ ಅದೇ ವಾರ್ಡಿನ ಸದಸ್ಯ ಅಧ್ಯಕ್ಷತೆ ವಹಿಸಬೇಕು.
- ವಾರ್ಡ್ ಸಭೆಯ ಕಾರ್ಯಸೂಚಿಯನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅಂಗೀಕರಿಸಬೇಕು.
- ಕನಿಷ್ಠ ಒಂದು ವಾರಕ್ಕೆ ಮುಂಚಿತವಾಗಿ ವಾರ್ಡ್ ಸಭೆಯ ಕುರಿತು ಮತದಾರರಿಗೆ ಪ್ರಚಾರದ ಮೂಲಕ ಮಾಹಿತಿ ತಲುಪಿಸಬೇಕು.

## ವಾರ್ಡ್ ಸಭೆಯ ಪ್ರಕಾರ್ಯಗಳು

ಜನರು ತಮ್ಮ ವಾರ್ಡ್‌ನ ವ್ಯಾಪ್ತಿಯಲ್ಲಿ ಇರುವ ಸಮಸ್ಯೆಗಳನ್ನು ಗುರುತಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು. ಕನಿಷ್ಟ ಪ್ರತಿ 6 ತಿಂಗಳಿಗೊಮ್ಮೆ ಸಭೆ ನಡೆಸಿ ಈ ಕೆಳಗಿನ ವಿಷಯಗಳ ಕುರಿತಂತೆ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

- ವಾರ್ಡ್‌ನಲ್ಲಿ ಅನುಷ್ಠಾನಗೊಳಿಸಬೇಕಾದ ಅಭಿವೃದ್ಧಿ ಯೋಜನೆಗಳ ಮತ್ತು ಕಾರ್ಯಕ್ರಮಗಳ ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು. ಅದನ್ನು ಗ್ರಾಮ ಪಂಚಾಯಿತಿಯ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಳ್ಳಲು ಗ್ರಾಮ ಸಭೆಗೆ ಮಂಡಿಸಲು ಕಳುಹಿಸಿಕೊಡುವುದು
- ಸರಕಾರದ ವಿವಿಧ ಯೊಜನೆಗಳಿಗೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳನ್ನು ಗುರುತಿಸುವುದು. ಈ ಪಟ್ಟಿಯನ್ನು ಗ್ರಾಮ ಪಂಚಾಯಿತಿಗೆ ಕಳುಹಿಸಿಕೊಡುವುದು
- ನಿವೃತ್ತಿ ವೇತನ, ಸಬ್ಸಿಡಿಯಂತಹ ಸಾಮಾಜಿಕ ಭದ್ರತೆ ಕಲ್ಪಿಸುವ ಸೌಲಭ್ಯಗಳ ನೆರವನ್ನು ಪಡೆದುಕೊಳ್ಳುತ್ತಿರುವ ವ್ಯಕ್ತಿಗಳ ಅರ್ಹತೆಯ ಬಗ್ಗೆ ಪರಿಶೀಲಿಸಿ ನಿರ್ಧರಿಸುವುದು
- ಮುಂದಿನ 6 ತಿಂಗಳ ಅವಧಿಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಿರುವ ಕಾಮಗಾರಿಗಳ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಮಾಹಿತಿ ಪಡೆಯುವುದು
- ಹಿಂದಿನ ವಾರ್ಡ್ ಸಭೆಯ ತೀರ್ಮಾನಗಳ ಅನುಷ್ಠಾನ / ಪ್ರಗತಿಯ ಕುರಿತು ಮಾಹಿತಿ ಪಡೆಯುವುದು
- ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುವ ವಿವಿಧ ಅಭಿವೃದ್ಧಿ ಕಾಮಗಾರಿ/ ಕಾರ್ಯಕ್ರಮಗಳಿಗೆ (ಸಂಪೂರ್ಣ ಸ್ವಚ್ಛತಾ ಆಂದೋಲನ, ಸಾಕ್ಷರತೆ, ಕುಡಿಯುವ ನೀರಿನ ಯೋಜನೆ ಇತ್ಯಾದಿ) ಸ್ವಯಂಸೇವಾ ಕಾರ್ಮಿಕರು, ಹಣ ಮತ್ತು ವಸ್ತು ರೂಪದಲ್ಲಿ ವಂತಿಕೆ ಒದಗಿಸುವುದು
- ತೆರಿಗೆ ಸಂದಾಯ ಮಾಡಲು ಹಾಗೂ ಸಾಲ ಮರುಪಾವತಿ ಮಾಡಲು ಸಾರ್ವಜನಿಕರ ಮನವೊಲಿಸುವುದು
- ಸಾರ್ವಜನಿಕ ಸೌಲಭ್ಯಗಳಾದ ಬೀದಿ ದೀಪ, ನಲ್ಲಿಗಳು ಇತ್ಯಾದಿಗಳನ್ನು ಅಳವಡಿಸಲು ಸೂಕ್ತ ಸ್ಥಳಗಳನ್ನು ಗುರುತಿಸುವುದು
- ನೀರು ಸರಬರಾಜು ಮತ್ತು ಬೀದಿ ದೀಪ ವ್ಯವಸ್ಥೆಗಳಲ್ಲಿ ಕೊರತೆಗಳನ್ನು ಗುರುತಿಸಿ ಪರಿಹಾರ



ಸೂಚಿಸುವುದು

- ಸ್ವಚ್ಛತೆ, ಪರಿಸರ ಮಾಲಿನ್ಯ ನಿವಾರಣೆ ಮುಂತಾದ ಸಾರ್ವಜನಿಕ ವಿಷಯಗಳ ಬಗ್ಗೆ ಅರಿವು ಮೂಡಿಸುವುದು
- ನೈರ್ಮಲ್ಯ ವ್ಯವಸ್ಥೆಗಳ ಸುಧಾರಣೆಗಾಗಿ ಗ್ರಾಮ ಪಂಚಾಯಿತಿಗೆ ನೆರವು ನೀಡುವುದು
- ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಉತ್ತೇಜನ ನೀಡುವುದು
- ಆರೋಗ್ಯ ಕೇಂದ್ರಗಳು ಚಟುವಟಿಕೆಗಳಿಗೆ ನೆರವು ನೀಡುವುದು
- ವಿವಿಧ ಸಮೂಹಗಳ ನಡುವೆ ಐಕ್ಯತೆ ಬೆಳೆಸುವುದು
- ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಣಯಗಳನ್ನು ಬಹುಮತದಿಂದ ಅಂಗೀಕರಿಸುವುದು.

## ಗ್ರಾಮ ಸಭೆ – ನಮ್ಮೂರ ವಿಧಾನ ಸಭೆ

ಗ್ರಾಮ ಸಭೆಯು ಪ್ರಜಾಪ್ರಭುತ್ವದ ತಾಯಿಬೇರು. ಜನರು ತಮ್ಮ ಬೇಕು–ಬೇಡಗಳನ್ನು ನಿರ್ಧರಿಸುವ, ಅವಶ್ಯಕತೆಗಳನ್ನು ಗುರುತಿಸುವ, ಆದ್ಯತೆಗಳನ್ನು ವ್ಯಕ್ತಪಡಿಸುವ ವೇದಿಕೆ ಗ್ರಾಮ ಸಭೆ. ಗ್ರಾಮ ಸಭೆಗಳು ಪರಿಣಾಮಕಾರಿಯಾಗಿ ನಡೆದರೆ, ಪಂಚಾಯಿತಿ ರಾಜ್ ವ್ಯವಸ್ಥೆ ಸುಧಾರಣೆಯಾಗುತ್ತದೆ. ಪ್ರಜಾಪ್ರಭುತ್ವದ ಶಕ್ತಿ ಹೆಚ್ಚುತ್ತದೆ. ಗ್ರಾಮ ಸಭೆಯನ್ನು ಯಶಸ್ವಿಯಾಗಿ ನಡೆಸುವ ನಿಟ್ಟಿನಲ್ಲಿ ಅನುಸರಿಸಬೇಕಾದ ನಿಯಮಗಳು ಹೀಗಿವೆ.

- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ವಾರ್ಡ್ ಸಭೆಗಳನ್ನು ಮೊದಲು ನಡೆಸಬೇಕು. ನಂತರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಂದು ಗ್ರಾಮ ಸಭೆಯನ್ನು ನಡೆಸಬೇಕು
- ಗ್ರಾಮ ಸಭೆಯನ್ನು ಕನಿಷ್ಟ 4 ತಿಂಗಳಿಗೊಮ್ಮೆ ನಡೆಸಬೇಕು.
- ಗ್ರಾಮ ಸಭೆಯ ಶೇ. 10ಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಕೋರಿಕೆಯ ಮೇರೆಗೆ ವಿಶೇಷ ಗ್ರಾಮಸಭೆಯನ್ನು ಕರೆಯಲು ಕಾಯಿದೆಯಲ್ಲಿ ಅವಕಾಶವಿದೆ. ಆದರೆ ಎರಡು ವಿಶೇಷ ಗ್ರಾಮ ಸಭೆಗಳ ನಡುವೆ ಕನಿಷ್ಟ ಮೂರು ತಿಂಗಳ ಅಂತರವಿರಬೇಕು



- ಗ್ರಾಮ ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರೇ ವಹಿಸಬೇಕು. ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅಥವ ಗ್ರಾಮ ಪಂಚಾಯಿತಿ ನಾಮ ನಿರ್ದೇಶನ ಮಾಡಿದ ಸದಸ್ಯರು ವಹಿಸಲು ಅವಕಾಶವಿದೆ.
- ಗ್ರಾಮ ಸಭೆ ಸದಸ್ಯರ ಒಟ್ಟು ಸಂಖ್ಯೆಯ 1/10ಕ್ಕೆ ಕಡಿಮೆಯಿಲ್ಲದಷ್ಟು ಅಥವಾ 100 ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅದು ಗ್ರಾಮ ಸಭಯ ಕೋರಂ. ಪ್ರತಿ ವಾರ್ಡ್‌ನಿಂದ ಕನಿಷ್ಠ 10 ಜನರು ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ಮಹಿಳೆಯರು, ಪರಿಶಿಷ್ಠ ಜಾತಿ ಹಾಗೂ ವರ್ಗದ ಪ್ರತಿನಿಧಿಗಳು ಮುಕ್ತವಾಗಿ ಗ್ರಾಮ ಸಭೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಬೇಕು.

## ಗ್ರಾಮ ಸಭೆಯ ಪ್ರಕಾರ್ಯಗಳು

- ಗ್ರಾಮ ಪಂಚಾಯಿತಿಯ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
- ವಾರ್ಡ್ ಸಭೆಯ ಶಿಫಾರಸ್ಸಿನ ಅನ್ವಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವನೆ ತಯಾರಿಸುವುದು. ಅವುಗಳಿಗೆ ಆದ್ಯತೆಗಳನ್ನು ನಿಗಧಿಪಡಿಸುವುದು.
- ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುವಲ್ಲಿ ಗ್ರಾಮ ಪಂಚಾಯಿತಿಗೆ ನೆರವು ನೀಡುವುದು
- ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವುದು. ಆದ್ಯತೆ ನಿಗಧಿಪಡಿಸುವುದು.
- ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ನಿರ್ವಹಣೆಗೆ ಸಂಬಂಧಿಸಿದ ಮಾಹಿತಿಯನ್ನು ಗ್ರಾಮ ಸಭೆಯ ಸದಸ್ಯರಿಗೆ ಒದಗಿಸುವುದು.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮುಂದಿನ 6 ತಿಂಗಳುಗಳ ಅವಧಿಯಲ್ಲಿ ಮಾಡಲು ಉದ್ದೇಶಿಸಿರುವ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯುವುದು
- ಗ್ರಾಮ ಪಂಚಾಯಿತಿ ಪ್ರದೇಶಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ತೀರ್ಮಾನಗಳು ಸೂಕ್ತವಾಗಿವೆಯೇ ಎಂದು ಮಾಹಿತಿ ಪಡೆಯುವುದು.
- ಗ್ರಾಮ ಸಭೆಯ ತೀರ್ಮಾನದ ಅನ್ವಯ ಗ್ರಾಮ ಪಂಚಾಯಿತಿಯು ಕೈಗೊಂಡ ಕ್ರಮಗಳ ಪ್ರಗತಿಯ ಬಗ್ಗೆ ಮಾಹಿತಿ ಪಡೆಯುವುದು.
- ಗ್ರಾಮ ಪಂಚಾಯಿತಿಯ ಹಿಂದಿನ ಹಣಕಾಸು ವರ್ಷದ ಲೆಕ್ಕಪತ್ರಗಳ ವಿವರಣೆ, ಲೆಕ್ಕಪರಿಶೋಧನಾ ಟಿಪ್ಪಣಿ ಹಾಗೂ ಉತ್ತರಗಳನ್ನು ಮಂಡಿಸುವುದು.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ವಿವಿಧ ಅಭಿವೃದ್ಧಿ ಕಾಮಗಾರಿ / ಕಾರ್ಯಕ್ರಮಗಳಿಗೆ (ಸಂಪೂರ್ಣ ಸ್ವಚ್ಛತಾ ಆಂದೋಲನ, ಸಾಕ್ಷರತೆ, ಕುಡಿಯುವ ನೀರಿನ ಯೋಜನೆ ಇತ್ಯಾದಿ) ಸ್ವಯಂಸೇವಾ ಕಾರ್ಮಿಕರು, ಹಣ ಮತ್ತು ವಸ್ತು ರೂಪದಲ್ಲಿ ವಂತಿಕೆ ಒದಗಿಸುವುದು

- ಸಾರ್ವಜನಿಕರು ತೆರಿಗೆ ಸಂದಾಯ ಹಾಗೂ ಸಾಲ ಮರುಪಾವತಿ (ವಸತಿ ಯೋಜನೆಗಳು, ಎಸ್.ಜಿ.ಎಸ್.ವೈ.) ಮಾಡುವಂತೆ ಮನವೊಲಿಸುವುದು.



- ಸಾರ್ವಜನಿಕ ಸೌಲಭ್ಯಗಳಾದ ಬೀದಿ ದೀಪ, ನಲ್ಲಿಗಳು ಇತ್ಯಾದಿಗಳನ್ನು ಅಳವಡಿಸಲು ಅವಶ್ಯಕತೆಗನುಗುಣವಾಗಿ ಸ್ಥಳಗಳನ್ನು ಗುರುತಿಸುವುದು.
- ನೀರು ಸರಬರಾಜು ಮತ್ತು ಬೀದಿ ದೀಪ ವ್ಯವಸ್ಥಗಳಲ್ಲಿ ಕೊರತೆಗಳನ್ನು ಗುರುತಿಸಿ ಪರಿಹಾರ ಸೂಚಿಸುವುದು.
- ಸ್ವಚ್ಛತೆ, ಪರಿಸರ ಮಾಲಿನ್ಯ ಮುಂತಾದ ವಿಷಯಗಳ ಬಗ್ಗೆ ಅರಿವು ಮೂಡಿಸುವುದು.
- ಅಂಗನವಾಡಿ, ಸ್ವಸಹಾಯ ಸಂಘ, ಯುವಕ ಸಂಘ ಇತ್ಯಾದಿಗಳ ಚಟುವಟಿಕೆಗಳಿಗೆ ಸಹಕರಿಸುವುದು.
- ಬಾಲಕಾರ್ಮಿಕರನ್ನು ಗುರುತಿಸಿ ಅವರ ಪುನರ್ವಸತಿಗಾಗಿ ಕ್ರಮ ಕೈಗೊಳ್ಳುವುದು.

**ಬಡತನ ನಿರ್ಮೂಲನ, ಅರಿವು– ಆಂಧೋಲನ, ಶೋಷಿತರ– ಸಬಲೀಕರಣ**

**ಗ್ರಾಮಸ್ವರಾಜ್ಯ**

**ಗ್ರಾಮಾಭಿವೃದ್ಧಿಯ ಜೀವಾಳವೇ ಗ್ರಾಮಸಭೆ**

**ಗ್ರಾಮಾಸಭೆಗಳಲ್ಲಿ ಪಾಲ್ಗೊಳ್ಳಿ ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳಿ**

- ಬಜೆಟ್ಟಿನಲ್ಲಿ ಮಾಡಿದ ಏರ್ಪಾಡು, ನಿಧಿ ಹಂಚಿಕೆ, ಕಾಮಗಾರಿಗಳ ಅಂದಾಜು ಬಗ್ಗೆ ಚರ್ಚಿಸುವುದು.
- ಗ್ರಾಮಾ ಪಂಚಾಯಿತಿ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 10 ಸದಸ್ಯರಿಗೆ ಕಡಿಮೆಯಿಲ್ಲದಂತೆ ಉಪಸಮಿತಿಗಳನ್ನು ರಚಿಸುವುದು. (ಈ ಸಮಿತಿಗಳಲ್ಲಿ ಶೇ. 50ಕ್ಕಿಂತ ಕಡಿಮೆಯಿಲ್ಲದಷ್ಟು ಮಹಿಳೆಯರು ಇರಬೇಕು)
- ಪಂಚಾಯಿತಿ ಜಮಾಬಂದಿ ವರದಿ ಹಾಗೂ ಅದರ ಬಗ್ಗೆ ಕೈಗೊಂಡ ಅನುಸರಣ ಕ್ರಮದ ಕುರಿತು ಚರ್ಚಿಸುವುದು
- ವಿಷಯಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ಸದಸ್ಯರ ಬಹುಮತದಿಂದ ಅಂಗೀಕರಿಸಿ ಸಭೆಯಲ್ಲೇ ಓದಿ ದಾಖಲಿಸಬೇಕು
- ಗ್ರಾಮ ಪಂಚಾಯತಿ ಅಧ್ಯಕ್ಷರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಅಧಿಕಾರಿಗಳಿಗೆ ಸೂಚನಾ ಪತ್ರ ಕಳುಹಿಸಿದಲ್ಲಿ ಅವರು ಗ್ರಾಮ ಸಭೆಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು.
- ನಿಯೋಜಿತ ನೋಡೆಲ್ ಅಧಿಕಾರಿ ಗ್ರಾಮ ಸಭೆ ನಡೆಯುವ ಬಗ್ಗೆ ಮೇಲುಸ್ತುವಾರಿ ವಹಿಸಿ, ತೆಗೆದುಕೊಂಡ ತೀರ್ಮಾನಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಲು ಕ್ರಮವಹಿಸಬೇಕು
- ಗ್ರಾಮ ಸಭೆಗೆ ಹಾಜರಾದ ಗ್ರಾಮ ಸಭೆಯ ಸದಸ್ಯರು (ಮತದಾರರು) ಗ್ರಾಮ ಪಂಚಾಯಿತಿ ಸದಸ್ಯರು, ಅಧಿಕಾರಿಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಬೇಕು.



ನಮ್ಮ ಹಕ್ಕು ತಿಳಿವೆವು
ಜನಾಧಿಕಾರ
ಚಲಾಯಿಸುವೆವು

# ನಮ್ಮೂರು–ನಮ್ಮ ಸವಲತ್ತು–ನಮ್ಮ ಆಯ್ಕೆ–ನಮ್ಮ ನಿರ್ಧಾರ




## ಸಂಪರ್ಕ ವಿಳಾಸ

ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)
ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್,
ವೀಲರ್ ರೋಡ್ ಬಡಾವಣೆ, ಬೆಂಗಳೂರು 560084.
ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com


ಕೃಪೆ : ಅಂತರ್ಜಾಲ

